‘ನಾನು ನಿನ್ನ ಸಮಯ ಹಾಳು ಮಾಡ್ತಿದ್ದೀನೆಯೆ? ನಿನಗೆ ಪಿತ್ತ ನೆತ್ತಿಗೇರಿದೆ, ನಿನಗೆ ನಿನ್ನ ಬಗ್ಗೆ ತುಂಬಾ ಜಂಭವಿದೆ? ನೀನು ನಿನ್ನನ್ನು ಏನೆಂದುಕೊಂಡಿದ್ದೀಯ?’

‘ನಾನು ಏನಾದರಾಗಿರಲಿ, ಆದ್ರೆ ಜಂಭ ಇರೋದು ನಿಮಗೆ! ಎಷ್ಟು ಹೊತ್ತಿನಿಂದ ನಿಮ್ಮ ಹೆಸರು ಕೇಳ್ತಿದ್ದೀನಿ, ನಿಮ್ಮ ಕೆಲಸದ ಬಗ್ಗೆ ಕೇಳ್ತಿದ್ದೀನಿ, ಆದ್ರೆ ನೀವು ಒಗಟಾಗಿ ಮಾತಾಡ್ತಿದ್ದೀರ. ನಾನು ನಡುಗಿದರೆ, ನಿಮಗೇನು? ನೀವು ನಡುಗುವುದಿಲ್ಲವಲ್ಲ. ಅಲ್ದೆ ನಾನು ನಡುಗ್ತಿರೋದು ನಿಮಗೆ ಹೇಗೆ ಗೊತ್ತಾಗುತ್ತೆ? ಹಾಗಂತ ನಿಮ್ಮ ಮುಖ ನೋಡಿದರೆ, ನೀವು ಗೂಂಡಾನಂತೆ ಕಾಣಿಸಲ್ಲ, ಆದ್ರೆ ನೀವು ಬೆದರಿಸುವ ಭಾಷೆಯಲ್ಲಿ ಮಾತಾಡ್ತಿದ್ದೀರ’.

‘ನೀನೀಗ ನನ್ನನ್ನು ಗೂಂಡಾ ಅಂತಲೂ ಹೇಳಿದೆಯಾ?’

‘ಎಲ್ಲಿ ಹೇಳಿದೆ? ಏನೇನೋ ಕಲ್ಪಿಸಿಕೊಳ್ತಿದ್ದೀರಿ. ನೀವು ನನ್ನ ಜೀವ ತೆಗೆದುಕೊಳ್ಳಬೇಕೆಂದಿದ್ದೀರ... ಆರೋಪದ ಮೇಲೆ ಆರೋಪ ಹೊರಿಸ್ತಿದ್ದೀರಿ. ನೀವು ಗೂಂಡಾನಂತೆ ಕಾಣಿಸ್ತಿಲ್ಲ ಅಂತ ಹೇಳಿದರೆ, ನನ್ನ ಮೇಲೇ ಸವಾರಿ ಮಾಡ್ತಿದ್ದೀರ? ಹೋಗ್ಲಿ, ನಿಮ್ಮ ಬಗ್ಗೆ ಬೇಗ ಹೇಳಿಬಿಡಿ. ಮಿಸ್ಟ್ರಿ ಸೀರಿಯಲ್ ಮಾಡಬೇಡಿ!

‘ನೀನು ನಿನ್ನ ಜೀವಮಾನದಲ್ಲಿ ಒಮ್ಮೆಯಾದರೂ ದೇವಸ್ಥಾನಕ್ಕೆ ಹೋಗಿದ್ದೀಯ?’

‘ಇದು ತುಂಬಾ ವೈಯಕ್ತಿಕ ವಿಷಯ. ಆದ್ರೂ ಹೇಳ್ತಿದ್ದೀನಿ. ಒಂದಲ್ಲ, ನೂರಾರು ಸಲ ಹೋಗಿದ್ದೇನೆ. ಒಂದು ಕಾಲದಲ್ಲಿ ನಿತ್ಯ ಹೋಗ್ತಿದ್ದೆ, ಒಂದೊಂದು ಸಲ ದಿನಕ್ಕೆ ಎರಡೆರಡು ಸಲವೂ ಹೋಗ್ತಿದ್ದೆ’.

‘ಆದ್ರೂ ನಿನಗೆ ನನ್ನನ್ನು ಗುರುತಿಸಲು ಆಗ್ಲಿಲ್ಲ?’

‘ನೀವು ದೇವಸ್ಥಾನದ ಪೂಜಾರಿಯೇ?’

‘ದುಷ್ಟ, ನಾನು ನಿನಗೆ ಪೂಜಾರಿಯಂತೆ ಕಾಣಿಸುವೆನಾ?’

‘ಓಹ್, ನಿಮಗೆ ಸಿಟ್ಟನ್ನು ಹೊರತುಪಡಿಸಿ ಬೇರೇನೂ ಬರಲ್ವ?’

‘ಈಗ ನನ್ನ ಮೇಲೆ ಆರೋಪ ಹೊರಿಸುತ್ತಿರುವೆ?’

‘ಹೋಗ್ಲಿ ಬಿಡಿ. ಇವತ್ತು ಬೆಳಿಗ್ಗೆ ಯಾರ ಮುಖ ನೋಡಿದ್ದೆನೋ... ತಲೆತಿನ್ನೋ ವ್ಯಕ್ತಿಯನ್ನು ಭೇಟಿ ಮಾಡಬೇಕಾಯ್ತು’.

‘ನೋಡು, ಎಚ್ಚರದಿಂದ ಮಾತಾಡು. ನಾನೀಗಲೇ ನಿನಗೆ ಶಾಪ ಹಾಕ್ತೀನಿ!’

‘ನೀವು ದೊಡ್ಡ ಪುರೋಹಿತರಿರಬೇಕು. ಇವತ್ತು ಋಷಿ ಮುನಿಗಳಂತೂ ಇಲ್ಲ!’

‘ನೀನು ನನ್ನನ್ನು ಒಂದೇ ಸಮನೆ ಅವಮಾನ ಮಾಡ್ತಿದ್ದೀಯ, ಮೂರ್ಖ!’

‘ನಿಮ್ಮ ಹತ್ರ ಮಾತಾಡ್ತಾ ಮಾತಾಡ್ತಾ ನನ್ನ ತಲೆಯೇ ಕೆಟ್ಟು ಹೋಯ್ತು. ಹೇಳಿ ಸ್ವಾಮಿ, ಈಗಲಾದರೂ ಹೇಳಿ. ಶುರು ಮಾಡಿದ ಜಗಳವನ್ನು ಈಗಲಾದರೂ ನಿಲ್ಲಿಸಿ. ಅಯ್ಯೋ ದೇವರೇ, ನಾನೆಲ್ಲಿ ಸಿಲುಕಿಕೊಂಡೆ!’

‘ಇನ್ನೇನು ಹೇಳೋದು, ಹೇಗೆ ಹೇಳೋದು, ಮೂರ್ಖ! ನನ್ನ ತಲೆಗೇ ಏನೂ ಹೊಳೆಯದಿದ್ದಾಗ, ನಿನಗೂ ಅರ್ಥವಾಗಲ್ಲ. ತಿಳೀತಾ? ನಾನು ದೇವರೆಂಬುದು ಈಗ್ಲೂ ನಿನಗೆ ತಿಳೀಲಿಲ್ಲ’.

‘ಸ್ವಾಮಿ, ಇದನ್ನು ಮೊದ್ಲೇ ಹೇಳಬೇಕಿತ್ತಲ್ವಾ? ಇಷ್ಟು ತಡ ಯಾಕೆ ಮಾಡಿದಿರಿ? ಅಡುಗೆ ಮನೆಯಲ್ಲಿ ಹೆಂಡ್ತಿ ಉರೀತಿದ್ದಾಳೆ... ಬೆಳ್ಳಂಬೆಳಿಗ್ಗೆ ಯಾರು ಬಂದಿದ್ದಾರೋ ಏನೋ, ಸುಮ್ನೆ ಹರಟೆ ಹೊಡೆಯುತ್ತಲೇ ಇದ್ದಾರೆ, ಇವರೂ ಅವರ ಜೊತೆಗೆ ಸೇರ್ಕೊಂಡಿದ್ದಾರೆ, ಗಂಡಸರಿಗೆ ಮನೆಯ ಒಂದೂ ಕೆಲ್ಸ ಬರಲ್ಲ, ಆದ್ರೆ ಮನಸ್ಸಿಗೆ ಬಂದಂತೆ ಹರಟ್ತಾರೆ ಅಂತ ಅವಳು ವಟಗುಟ್ಟುತ್ತಿರುವುದು ನಿಮಗೂ ಕೇಳಿಸುತ್ತಿರಬಹುದು. ನೀವ್ಯಾರು ಅಂತ ಅವಳಿಗೆ ಮೊದಲೇ ತಿಳಿದರೆ, ನೀವು ಸ್ವರ್ಗ ಪರ್ಗ ಮರೆತು ಬಿಡುವಂತೆ ನಿಮ್ಮನ್ನು ಸತ್ಕರಿಸುತ್ತಿದ್ದಳು! ನಾನೂ ಅವಳ ಭಯದಿಂದ ವಾದ ಮಾಡಲ್ಲ. ನೀವೆಲ್ಲಾ ಹಾಳು ಮಾಡಿಬಿಟ್ಟಿರಿ. ತಡೀರಿ, ನಿಮ್ಮ ದರ್ಶನ ಮಾಡಿಸಲು ನಾನೀಗಲೇ ಅವಳನ್ನು ಇಲ್ಲಿಗೆ ಕರೀತೀನಿ’.

‘ಬೇಡ, ಖಂಡಿತ ಬೇಡ. ಯಾರನ್ನೂ ಕರೆಯುವ ಅಗತ್ಯ ಇಲ್ಲ, ದರ್ಶನ ಮಾಡಿಸಬೇಕಾಗಿಯೂ ಇಲ್ಲ. ಅವಳು ನಿಜವಾದ ಭಕ್ತೆಯಾಗಿದ್ದರೆ, ನನ್ನನ್ನು ಮೊದಲೇ ಗುರುತಿಸುತ್ತಿದ್ದಳು’.

‘ಅವಳು ನಿಜವಾದ ಭಕ್ತೆ, ಸ್ವಾಮಿ! ನನ್ನನ್ನು ನಂಬಿ’.

‘ಅರೇ ಮೂರ್ಖ, ಈಗಲಾದರೂ ನೀನು ನನಗೆ ದೇವರು ಅಂತ ಹೇಳು. ಈಗ ನೀನು ಯಾರನ್ನು ಕಾಯ್ತಿದ್ದೀಯ? ನನ್ನನ್ನು ದೇವರು ಅನ್ನೋದಕ್ಕೆ ಜ್ಯೋತಿಷಿಗಳ ಮುಹೂರ್ತ ಕೇಳ್ತೀಯಾ?’

‘ಸರಿ, ನೀವು ದೇವರೇ ಆಗಿ!’

‘ಆಗೋದೇನು ಬಂತು!, ದೇವರು ಅಂತಲೇ ಹೇಳು’.

‘ಹೂಂ ಹೂಂ, ದೇವರು ಅಂತ ಹೇಳಿದೆನಲ್ಲ’.

‘ನೀನು ತುಂಬಾ ಹುಣಸೆ ಹಣ್ಣು ಕಣಯ್ಯ!’

‘ಆದ್ರೆ ನನ್ನ ಹೆಂಡ್ತಿ ಮಾತ್ರ ನೇರ ಸ್ವಭಾವದವಳು. ನೀವು ಅವಳಿಗೆ ದರ್ಶನ ನೀಡಿ. ಅವಳ ಜೀವನ ಪಾವನವಾಗುತ್ತೆ’.

‘ನಾನು ದರ್ಶನ ಕೊಡಲ್ಲ ಅಂತ ಹೇಳಿದ ಮೇಲೆ ಕೊಡಲ್ಲ. ನನಗೆ ಅವಳ ಬಗ್ಗೆಯೂ ಕೋಪವಿದೆ. ಯಾವ ಮೂರ್ಖ ಅವಳನ್ನು ಮದುವೆಯಾದನೋ!’

‘ಅವಳೆಲ್ಲಿ ಮದುವೆ ಮಾಡಿಕೊಂಡಳು? ನಾನೂ ನಾನಾಗಿಯೇ ಅವಳನ್ನು ಮದುವೆಯಾಗಲಿಲ್ಲ. ನಮ್ಮ ಅಪ್ಪ–ಅಮ್ಮ ನಮ್ಮ ಮದುವೆ ಮಾಡಿಸಿದರು. ಹೋಗಲಿ, ಅವರು ಮಾಡಿದ್ದು ಸರಿಯೇ, ನನಗೆ ಈ ಬಗ್ಗೆ ಪಶ್ಚಾತ್ತಾಪವಿಲ್ಲ. ನೀವು ಸ್ವಲ್ಪ ತಡೀರಿ. ಅವಳಿಗೆ ನೀವು ಈ ಮನೆಗೆ ಬಂದಿದ್ದಿರಿ, ಅವಳು ನಿಮ್ಮ ಬಗ್ಗೆಯೇ ವಟವಟ ಅನ್ನುತ್ತಿದ್ದಳು, ನಾನು ನಿಮ್ಮ ದರ್ಶನ ಅವಳಿಗೆ ಮಾಡಿಸಲಿಲ್ಲ ಎಂಬುದು ತಿಳಿದರೆ, ಅವಳು ಈ ಜನ್ಮದಲ್ಲಿ ಅಲ್ಲ, ಮುಂದಿನ ಜನ್ಮದಲ್ಲೂ ನನ್ನ ಜೀವ ತಿಂದು ಬಿಡ್ತಾಳೆ! ಪ್ಲೀಸ್, ಒಂದೇ ಒಂದು ನಿಮಿಷ! ಅವಳು ಒಳಗೇ ಇದ್ದಾಳೆ. ಈಗ್ಲೇ ಬಂದು ಬಿಡ್ತಾಳೆ’.

‘ಬೇಡ ಅಂತ ಹೇಳಿದೆನಲ್ಲ, ಒಂದ್ಸಲ ಬೇಡ ಅಂದರೆ ಬೇಡ. ತಿಳೀತಾ?’

‘ಈಗ ನನಗೆ ನೀವು ನಿಜವಾಗಿ ದೇವರೋ, ಅಲ್ಲವೋ ಎಂದು ಅನುಮಾನವಾಗ್ತಿದೆ?’

‘ಓಹೋ, ನಾನು ನಿನ್ನ ಹೆಂಡತಿಗೆ ದರ್ಶನ ಕೊಡಲು ಒಪ್ಪಲಿಲ್ಲ, ಅದಕ್ಕೇ ನಾನು ನಿನ್ನ ದೃಷ್ಟಿಯಲ್ಲಿ ದೇವರಾಗಲಿಲ್ಲ, ನೀನು ತುಂಬಾ ಚಾಲಾಕಿ ಮನುಷ್ಯ...’

‘ಅದಿರ್ಲಿ, ನೀವು ನಿಮ್ಮ ಸಮಯವನ್ನು ಹಾಳು ಮಾಡಿಕೊಂಡಿದ್ದಲ್ಲದೆ, ನನ್ನ ಸಮಯವನ್ನೂ ಹಾಳು ಮಾಡಿದಿರಿ, ಅದಕ್ಕೇ ನನಗೆ ನಿಮ್ಮ ಬಗ್ಗೆ ಖಂಡಿತ ಸಂಶಯವಾಗುತ್ತಿದೆ. ನೋಡಿ, ಮನುಷ್ಯನಿಗೆ ಎರಡು ನಿಮಿಷ ಸಹ ಪುರುಸೊತ್ತು ಸಿಗಲ್ಲ. ಹೀಗಿರುವಾಗ ಇಡೀ ಜಗತ್ತನ್ನು ರಕ್ಷಿಸುವ, ದೇವರಾಗಿರುವ ನಿಮಗೆ ಇಷ್ಟು ಸಮಯ ಹೇಗೆ ಸಿಗುತ್ತೆ? ನೀವು ನಿವೃತ್ತ ಹಿರಿಯ ನಾಗರಿಕರಿರಬೇಕು, ನನ್ನನ್ನು ಮೂರ್ಖನನ್ನಾಗಿ ಮಾಡ್ತಿದ್ದೀರಿ. ಹೇಳಿ, ನಿಜ ಹೇಳಿ?’

‘ನಾನೀಗ ನಿನಗೆ ನಿವೃತ್ತ ಹಿರಿಯ ನಾಗರಿಕನಾಗಿ ಕಾಣಿಸ್ತಿದ್ದೇನೆಯೇ? ನೋಡು, ನಾನು ನಿನಗೆ ಶಾಪ ಕೊಟ್ಟರೆ, ಆಗ ನಿನಗೆ ನನ್ನ ಶಕ್ತಿ ಮತ್ತು ಸಾಮರ್ಥ್ಯ ಏನೆಂದು ತಿಳಿಯುತ್ತೆ. ಕೊಡ್ಲಾ ಶಾಪ? ಈಗ ಮಾತಾಡು, ನಿನ್ನ ಬಾಯಿ ಯಾಕೆ ಮುಚ್ಚಿಹೋಯ್ತು?’

‘ಮುಚ್ಚಿಲ್ಲ, ತೆರೆದಿದೆ. ಶಾಪ ಕೊಡಿ! ಇದು ಇಪ್ಪತ್ತೊಂದನೆಯ ಶತಮಾನ ಅನ್ನೋದು ನಿಮಗೆ ಸ್ವಲ್ಪವಾದರೂ ತಿಳಿದಿರಬೇಕು. ಈಗ ಈ ಶಾಪ–ಗೀಪ ಎಲ್ಲಾ ಹಳತಾಯ್ತು. ಯಾವ ಕತ್ತೆಯೂ ಇದನ್ನು ನಂಬಲ್ಲ!’

‘ನಂಬುತ್ತೆ... ನೀನೂ ನಂಬ್ತೀಯ’.

‘ನೀವು ಬರೇ ಮಾತಾಡ್ತೀರೋ ಅಥವಾ ಮಾಡಿಯೂ ತೋರಿಸ್ತೀರೋ?’

‘ನೋಡು, ಈಗಲಾದರೂ ಎಚ್ಚೆತ್ತುಕೋ, ಇಲ್ಲದಿದ್ದರೆ ಜೀವಮಾನವಿಡಿ ಪಶ್ಚಾತ್ತಾಪ ಪಡ್ತೀಯ’.

‘ಅಳೋದು, ವ್ಯಥೆಪಡೋದು ಮನುಷ್ಯನ ಜೀವನದಲ್ಲಿ ಇದ್ದಿದ್ದೇ! ನಾನು ಇನ್ನೊಂದು ಸ್ವಲ್ಪ ಜಾಸ್ತಿ ಅಳ್ತೀನಿ. ಏನಾಯ್ತೀಗ?’

‘ಮೂರ್ಖ, ನಾನು ನಿನ್ನ ಬಗ್ಗೆ ಪದೇ ಪದೇ ದಯೆ ತೋರುತ್ತಿದ್ದೇನೆ, ಆದ್ರೆ ನಿನ್ನ ಉದ್ದಟತನ ಹೆಚ್ಚುತ್ತಲೇ ಇದೆ’.

‘ನನ್ನ ಮೇಲೆ ದಯೆ? ನನಗೆ ಯಾರ ದಯೆ ಬೇಡ. ನೀವು ಒಂದು ವೇಳೆ ದೇವರೇ ಆಗಿದ್ದರೂ ನಿಮ್ಮ ದಯೆ ನನಗೆ ಬೇಕಿಲ್ಲ. ನನಗೆ ನನ್ನ ಭುಜಬಲದಲ್ಲಿ ನಂಬಿಕೆಯಿದೆ’.

‘ನೆನಪಿಟ್ಟುಕೋ, ನಿನಗೂ ವಯಸ್ಸಾಗುತ್ತೆ, ನಿನ್ನ ಈ ಭುಜಬಲವೆಲ್ಲಾ ಇಲ್ಲೇ ಮಣ್ಣಾಗುತ್ತೆ. ನನಗೆ ಯಾವುದೇ ವಿಧದಲ್ಲಿ ಮೋಸ ಮಾಡ್ಬೇಡ. ನಾನು ನಿನ್ನನ್ನು ಕ್ಷಮಿಸುತ್ತಿದ್ದರೆ, ನೀನು ಹಟಮಾಡುತ್ತಲೇ ಇದ್ದೀಯ’.

‘ನಾನೇನಾದರೂ ಶಾಪ ಕೊಟ್ಟರೆ, ನೀನು ಈಗ್ಲೇ ಭಸ್ಮ ಆಗಿಬಿಡ್ತೀಯ, ನೆನಪಿಟ್ಟುಕೋ’.

‘ಆಗ್ಲಿ ಬಿಡಿ! ನಾನು ಭಸ್ಮವಾದರೆ ಅದಕ್ಕೆ ನೀವು ಜವಾಬ್ದಾರರಲ್ಲ ಅಂತ ಬರೆದುಕೊಡಲೇ? ಆದ್ರೆ ನೀವು ನನ್ನನ್ನು ಭಸ್ಮ ಮಾಡಬೇಕಾಗುತ್ತೆ. ಭಸ್ಮ